ಶ್ರೀ ಸಿ.ಎಸ್.ಬಿ. ನೋಸ್, ಮ್ಯಾನೇಜರ್ ಮತ್ತು ಶ್ರೀ ಎಂ. ಪದ್ಮನಾಭ ಭಟ್ಟ, ಫೈನಾನ್ಸಿಯಲ್ ಕಂಟ್ರೋಲರ್ ಅವರು ಜವಾಬ್ದಾರರೆಂದು ದೂರಿನಲ್ಲಿ ನಮೂದಿಸಿದೆ. ಇವರ ಬಗ್ಗೆ ನ್ಯಾಯಾಲಯವು ಇತ್ಯರ್ಥಗೊಳಿಸಬೇಕಾಗಿದೆ.

೨೫) ೧೯೮೭ರ ಸಾಲಿನಲ್ಲಿ ಘೋಷಣೆಯಾದ ಬೆಂಗಳೂರು ವಿಶ್ವವಿದ್ಯಾನಿಲಯದ ಪರೀಕ್ಷೆಗಳ ಫಲಿತಾಂಶದಲ್ಲಿ ಭಾಗಿ ಮೋಸ ನಡೆದಿರುವುದರ ಬಗ್ಗೆ

ಶ್ರೀ ಎಂ. ವೀರಪ್ಪ ಮೊಯಿಲಿ.— ೧೯೮೭ರ ಸಾಲಿನಲ್ಲಿ ಘೋಷಣೆಯಾದ ಬೆಂಗಳೂರು ವಿಶ್ವವಿದ್ಯಾನಿಲಯದ ಪದವೀಧರ ಪರೀಕ್ಷೆ ಫಲಿತಾಂಶದಲ್ಲಿ ಭಾರೀ ಮೋಸ, ವಂಚನೆ, ಪೋರ್ಜರಿ ಮತ್ತು ನಿರ್ಲಕ್ಷತನವಾಗಿದೆಯೆಂದು ಸಹಸ್ರಾರು ವಿದ್ಯಾರ್ಥಿ ಸಮುದಾಯ ಚಳವಳಿಯನ್ನು ನಡೆಸುತ್ತಿದ್ದಾರೆ. ಈ ವಿಚಾರವನ್ನು ಉಪಕುಲಪತಿಗಳು ಒಪ್ಪಿ, ಸಿಬ್ಬಂದಿಯ ಕೊಗತೆಯಿಂದ ಈ ರೀತಿಯ ಗೊಂದಲವಾಯಿತೆಂದರೂ ಈವರೆಗೆ ಯಾವುದೇ ರೀತಿಯ ಪರಿಹಾರದ ನಿರ್ದಿಷ್ಟ ಕಾರ್ಯಕ್ರಮಗಳನ್ನು ಕೈಗೊಂಡಿಲ್ಲ, ಸನ್ಮಾನ್ಯ ಮುಖ್ಯಮಂತ್ರಿಗಳು ಉನ್ನತಶಿಕ್ಷಣ ಸಚಿವರು, ಕೂಡ ಸಮಸ್ಯೆಗಳ ಕುರಿತು ಮನವರಿಕೆಯಾದರೂ ಮೂಕ ಪ್ರೇಕ್ಷಕರಾಗಿ ಕುಳಿತಿರುವುದು ಶೋಚನೀಯ. ದೈನಿಕ ಪತ್ರಿಕೆಗಳು, ಅಂಕಿಸಂಖ್ಯೆಗಳಿಂದ, ನಿರ್ದಿಷ್ಟವಾದ ದಾಖಲೆಗಳ ಆಧಾರದ ಮೇಲೆ ಸಾಬೀತಾಗಿರುವ ವರದಿಗಳನ್ನು ಪ್ರಕಟಪಡಿಸಿದರೂ.ಸಾವಿರಾರು ವಿದ್ಯಾರ್ಥಿಗಳು ಪ್ರದರ್ಶನ ನಡೆಸಿದರೂ ಸರಕಾರದ ಮನಕರಗದೆ—ವಿಶ್ವವಿದ್ಯಾನಿಲಯದಲ್ಲಿ ಬೇರು ಬಿಟ್ಟಿರುವ ವಂಚನೆಯ ಜಾಲದ ಹಿಂದಿರುವ ವ್ಯಕ್ತಿಗಳನ್ನು ಗುರುತಿಸಿ—ಅನ್ಯಾಯವನ್ನು ಸರಿಪಡಿಸಿ ವಿದ್ಯಾರ್ಥಿ ಸಮುದಾಯದ ಸಹಾಯಕ್ಕೆ ಬಾರದಿರುವುದು ಸರಕಾರದ ಹೃದಯ ಶೂನ್ಯತೆಯನ್ನು ಎದ್ದು ತೋರಿಸುತ್ತದೆ.

ಈ ಕೆಳಗಿನ ಅಕ್ರಮಗಳು ಸಾರಾಸಗಟಾಗಿ ನಡೆದಿದೆ.—

೧) ಫಲಿತಾಂಶಗಳು ಕಂತಿನಲ್ಲಿ ಬಂದಿವೆ ೨) ಕೆಲವು ಮಾರ್ಕ್ಸ್‌ಕಾರ್ಡಗಳಲ್ಲಿ ಮಾರ್ಕುಗಳ ಕಾಣೆ ೩) ಕೆಲವು ವಿದ್ಯಾರ್ಥಿಗಳಿಗೆ ಎರಡು ಮಾರ್ಕ್ಸ್ ಕಾರ್ಡುಗಳು ಬಂದಿವೆ. ೪) ಕೆಲವು ಮಾರ್ಕ್ಸ್ ಕಾರ್ಡುಗಳಲ್ಲಿ ವಿಷಯಗಳನ್ನು ತಪ್ಪಾಗಿ ನಮೂದಿಸಲಾಗಿದೆ. ೫) ಕೆಲವು ಮಾರ್ಕ್ಸ್ ಕಾರ್ಡುಗಳಲ್ಲಿ ಒಟ್ಟು ಅಂಕಿಗಳು ತಪ್ಪಾಗಿವೆ ೬) ಉತ್ಕೃಷ್ಟ ಶ್ರೇಣಿಯಲ್ಲಿ ಉತ್ತೀರ್ಣರಾಗುವ ವಿದ್ಯಾರ್ಥಿಗಳಿಗೆ ಸಿಂಗಲ್ ಡಿಜಿಟ್ ಮಾರ್ಕುಗಳು ಸಿಕ್ಕಿವೆ. ೭) ಈ ದಿವಸದವರೆಗೆ ಒಟ್ಟು ಫಲಿತಾಂಶದ ಶೇಕಡವಾರು ಅಥವಾ ರ್ಯಾಂಕು ಪಟ್ಟಿಗಳನ್ನು ಪ್ರಕಟಿಸಿಲ್ಲ.೮) ಹಲವಾರು ಮಾರ್ಕ್ಸ್ ಕಾರ್ಡಗಳಲ್ಲಿ ಟ್ಯಾಬುಲೇಟರ್ಸ್ ಸಹಿಗಳು ಕಂಡು ಬಂದಿಲ್ಲ. ಇದ್ದರೂ ವ್ಯತ್ಯಾಸವಿದೆ. ೯) ಅತ್ಯುತ್ತಮ ಫಲಿತಾಂಶವನ್ನು ಪಡೆಯಬಯಸಿದ್ದ ಹೆಸರಾಂತ ವಿದ್ಯಾಸಂಸ್ಥೆಗಳ ಫಲಿತಾಂಶ ತೀವ್ರ ಇಳಿಮುಖವಾಗಿದೆ.

ಮೇಲೆ ಕಾಣಿಸಿದ ಅಕ್ರಮಗಳಲ್ಲದೆ ಇನ್ನೂ ಹಲವು ಲೋಪದೋಷಗಳು ಎದ್ದು ಕಾಣುತ್ತಿವೆ. ಆದುದರಿಂದ ಉನ್ನತ ಶಿಕ್ಷಣ ಸಚಿವರು ಮೇಲೆ ಕಾಣಿಸಿದ ವಿದ್ಯಾರ್ಥಿ ಸಮುದಾಯದ ಸಮಸ್ಯೆಗಳ ಬಗ್ಗೆ ಗಮನ ಹರಿಸಿ ತುರ್ತುಪರಿಹಾರ ಕ್ರಮ ಕೈಗೊಳ್ಳಬೇಕಾಗಿ ಆಗ್ರಹ ಪಡಿಸುತ್ತೇನೆ. ಸಪ್ಲಿಮೆಂಟರಿ ಪರೀಕ್ಷೆಗಳಿಗೆ ಫೀಸನ್ನು ಕಟ್ಟುವ ಕಾಲಾವಕಾಶವೂ ಕೊನೆಯಾಗುವುದರಿಂದ ಕೂಡಲೇ ವ್ಯವಸ್ಥೆ ಮಾಡಬೇಕಾಗಿ ವಿನಂತಿ.

ಶ್ರೀ ಜೀವರಾಜ ಆಳ್ವ.—ಸನ್ಮಾನ್ಯ ಅಧ್ಯಕ್ಷರೇ, ೧೯೮೭ನೇ ಸಾಲಿನ ಬೆಂಗಳೂರು ವಿಶ್ವವಿದ್ಯಾನಿಲಯದ ಪರೀಕ್ಷಾ ಫಲಿತಾಂಶದಲ್ಲಿ ಹೊರನೋಟಕ್ಕೆ ತಪ್ಪುಗಳು ಕಂಡುಬಂದರೂ ಕೂಡ ಆ ಬಗ್ಗೆ ನಾನು ಮತ್ತು ನಾನ್ಯ ಮುಖ್ಯಮಂತ್ರಿಗಳವರು ವಿದ್ಯಾರ್ಥಿಗಳ ಜೊತೆಗೆ ಚರ್ಚೆ ನಡೆಸಿದ್ದೇವೆ. ಆ ಸಂದರ್ಭದಲ್ಲಿ ಅವರು ರೀವ್ಯಾಲ್ಯುಯೇಶನ್‌ಗೆ ಹಣ ಕಟ್ಟಲಿಕ್ಕೆ ತೊಂದರೆಯಾಗುತ್ತದೆ ಎಂದು ಅವರು ಹೇಳಿದಾಗ, ಸರಕಾರ ಹಣವನ್ನು ಭರಿಸಲಿಕ್ಕೆ ತಯಾರಾಗಿದೆ ಎಂದು ಹೇಳಿದ್ದೇನೆ. ಒಂದು ಸಬ್ಜೆಕ್ಟ್‌ನಲ್ಲಿ ಬಹಳ ಕಡಿಮೆ ಮಾರ್ಕ್ಸ್ ಬಂದಿವೆ ಎಂಬುದನ್ನು ಕಂಡುಕೊಂಡು ಅದಕ್ಕೋಸ್ಕರವಾಗಿ ರೀವ್ಯಾಲ್ಯುವೇಷನ್ ಮಾಡಲು ತೀರ್ಮಾನ ತೆಗೆದುಕೊಳ್ಳಲಾಯಿತು. ಆದ್ದರಿಂದ ಅವರು ಹೇಳಿದ್ದರಲ್ಲಿ ಕೆಲವು ಉತ್ಪ್ರೇಕ್ಷೆ ಕೂಡ ಇವೆ. ಕಳೆದ ಆರು ವರ್ಷಗಳಿಂದಲೂ ಒಳ್ಳೆಯ ರಿಸಲ್ಟ್ ಬರುತ್ತಿದ್ದ ಪರೀಕ್ಷೆಗಳಿಗೆ ಈ ವರ್ಷ ಮಾಲ್‌ಪ್ರಾಕ್ಟೀಸನ್ನು ತಡೆಯಬೇಕೆಂದು ಸರ್ಕಾರ ವಿಜಿಲೆನ್ಸನ್ನು ಜಾಸ್ತಿ ಮಾಡಿರುವುದರಿಂದ,

ಮತ್ತು ಉತ್ತಮ ಬುಕ್ಸ್ ಬಂದು ಆಟ್‌ಮಾಸ್‌ಫಿಯರ್ ಚೇಂಜ್ ಆಗಿರುವುದರಿಂದ ಈ ರೀತಿ ಆಗಿದೆ. Normally, whenver there is a revaluation done, 10 to 15% grace is allowed.

ಆ ಕಾರಣದಿಂದ ಫಲಿತಾಂಶಗಳು ಹೆಚ್ಚಿಲ್ಲದಿರಬಹುದು. ಆ ಕಾರಣ we have been able to maintain the sanctity of examination. We are prepared for total revaluation. ರೀ ವಾಲ್ಯುಯೇಷನ್ ಅನ್ನು ನಾವು ಮಾಡಿಸಿದಾಗ ಉತ್ತರಗಳ ಗುಣವಂಟ್ಟಕ್ಕೂ ನೀಡಲಾಗಿರುವ ಅಂಕಗಳಿಗೂ ಮೆಜಾರಿಟಿ ಪೇಪರ್‌ಗಳಲ್ಲಿ ಸಾಮ್ಯವಿರುವುದು ಕಂಡು ಬಂದಿದೆ. ಆದ್ದರಿಂದ ೮೦ ಪರ್ಸೆಂಟ್ ರಿಸಲ್ಟ್ ಇದ್ದದ್ದು ೪೦ ಪರ್ಸೆಂಟಿಗೆಯಲಂ ಪ್ರೈಮಾಫೇಸಿ ಮೇಲಿನ ಕಾರಣದಿಂದ ಒಪ್ಪಿಕೊಂಡರೂ ಬಿಕಾಂ ಪರೀಕ್ಷೆಗಳ ೬೦೦ ಪೇಪರ್‌ಗಳನ್ನು ರೀವ್ಯಾಲ್ಯೂಯೇಷನ್ ಮಾಡಿದ ಮೇಲೆ ೫೦ರಲ್ಲಿ ಹೆಚ್ಚು ಕಡಿಮೆ ನಡೆದಿದೆ ಎಂದು ಕಂಡುಬಂದ ಮೇಲೆ ವಿದ್ಯಾರ್ಥಿಗಳು ಹೇಳುವುದರಲ್ಲಿ ಉತ್ಪ್ರೇಕ್ಷೆ ಇವೆಯೆಂದು ಕಂಡುಬಂತಂ. ಜೊತೆಗೆ ಉಪಕುಲಪತಿಗಳು ಹೊಸದಾಗಿ ಬಂದು ವಿದ್ಯಾ ಕ್ಷೇತ್ರದಲ್ಲಿ ಇದ್ದ ತಪ್ಪುಗಳನ್ನು ತಿದ್ದುತ್ತಿರುವುದರಿಂದ ಮತ್ತು ಮಾಲ್ ಪ್ರಾಕ್ಟೀಸನ್ನು ಆದಷ್ಟೂ ಹಿಡಿತದಲ್ಲಿಟ್ಟಿರುವುದರಿಂದ ಫಲಿತಾಂಶದಲ್ಲಿ ಕುಸಿತವಾಗಿದೆ. ಇದರ ಜೊತೆಗೆ ಇಲ್ಲಿ ಮಾತನಾಡಿದ ಸದಸ್ಯರ ಸಲಹೆಗಳನ್ನೂ ನಾನು ಪರಿಶೀಲನೆಗೆ ತೆಗೆದುಕೊಂಡಿದ್ದೇನೆ. ಒಂದು ವೇಳೆ ತಪ್ಪು ನಡೆದಿದ್ದರೆ ತಪ್ಪಿತಸ್ಥ ಯಾವುದೇ ವ್ಯಕ್ತಿ ಇರಲಿ ಖಂಡಿತ ಅವರನ್ನು ಶಿಕ್ಷೆಗೊಳಪಡಿಸುತ್ತೇವೆ.

ಪ್ರಕಟಣೆ

ಅಧ್ಯಕ್ಷರು.—ಈಗ ಪ್ರಕಟಣೆ. ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶ ಬಂದಿದೆ.—

"ಕರ್ನಾಟಕ ವಿಧಾನಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಂ ೧೧೪ರ ಮೇರೆಗೆ ವಿಧಾನಸಭೆಯಿಂದ ಅಂಗೀಕಾರವಾದ ಈ ಕೆಳಕಂಡ ವಿಧೇಯಕವನ್ನು ಕರ್ನಾಟಕ ವಿಧಾನಪರಿಷತ್ತಿನಲ್ಲಿ ದಿನಾಂಕ ೧೧–೯–೮೭ರಂದು ಅನುಮೋದಿಸಲಾಯಿತೆಂದು ತಿಳಿಸುತ್ತೇನೆ.

ಕರ್ನಾಟಕ ಧನ ವಿನಿಯೋಗ ವಿಧೇಯಕ (ಸಂಖ್ಯೆ ೩) ೧೯೮೭"

ಅಧ್ಯಕ್ಷರು —ಈಗ ಸಾರ್ವಜನಿಕರ ಮಹತ್ವದ ಜರೂರು ವಿಷಯಗಳ ಮೇಲೆ ಅಲ್ಪಕಾಲಾವಧಿ ಚರ್ಚೆ. ೭ ಜನ ಭಾಷಣಕಾರರಿದ್ದಾರೆ ಪ್ರತಿಯೊಬ್ಬರಿಗೆ ೧೦ ಮಿನಿಟ್ಸ್, ಹಿಡಿದರೂ ೭೦ ಮಿನಿಟ್ ಆಗಿ ಬೇಗ ಮುಗಿಸಬಹುದು. ಜಾಸ್ತಿ ಅಂದರೆ ೧೫ ನಿಮಿಷಕ್ಕಿಂತ ಹೆಚ್ಚು ಯಾರಿಗೆ ಕೊಡಲು ಸಾಧ್ಯವಾಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೇ, ೧೫ ನಿಮಿಷದಲ್ಲಿ ಮುಗಿಸುವ ವಿಷಯವಲ್ಲ ಇದು.

ಅಧ್ಯಕ್ಷರು.—ಆಯಿತು, ನೀವು ಶುರು ಮಾಡಿ.

ಶ್ರೀ ಗಂಗಣ್ಣ (ಕಳ್ಳಂಬೆಳ್ಳ) —ಸ್ವಾಮಿ, ನಾನು ಕಳುಹಿಸಿದ ಒಂದು ವಿಷಯ ಕಳೆದ ಐದು ದಿವಸ ದಿಂದ ನಾಳೆ ನಾಳೆ ಅಂದುಕೊಂಡೇ ಮುಂದೆ ಹೋಗುತ್ತಿದೆ. ನನಗೆ ಅದನ್ನು ಪ್ರಸ್ತಾಪಿಸಲು ಈಗ ಅವಕಾಶ ಕೊಡಿ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು.—ಸ್ವಾಮಿ, ನನ್ನದೂ ಅಷ್ಟೆ, ನಾನು ನೋಟಿಸ್ ಕೊಟ್ಟಿದ್ದೇನೆ.

ಅಧ್ಯಕ್ಷರು.—ನೋಡ್ರಿ, ನಾನು ಕರೆದಾಗ ನೀವು ಇರಬೇಕು, ಆದರೆ ನೀವಿರಲಿಲ್ಲ. ಈಗ ಆಲ್ಲಿಂದ ಕೂಗಿಕೊಂಡರೆ ಉಪಯೋಗ ಇಲ್ಲ.

ಶ್ರೀ ಗಂಗಣ್ಣ.—ಸ್ವಾಮಿ ಇವತ್ತು ನನಗೆ ಅವಕಾಶ ಕೊಡದಿದ್ದರೆ ನಾನು ಧರಣಿ ಕೂರಬೇಕಾಗುತ್ತದೆ.